# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಸರ್ಕಾರಿ ಪ್ರೌಢಶಾಲೆಗಳಲ್ಲಿ ಹೆಚ್ಚುವರಿ ಶಿಕ್ಷಕರನ್ನು ಮತ್ತು ಹೆಚ್ಚುವರಿ ಖಾಲಿ ಹುದ್ದೆಗಳನ್ನು ಗುರುತಿಸಿ ಸ್ಥಳಾಂತರಿಸುವ ಬಗ್ಗೆ.

ಉಲ್ಲೇಖ: 1) ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ: 17.03.2011 ರಂದು ನಡೆದ ಸಭಾ ನಿರ್ಣಯ.

2) ನಿರ್ದೇಶಕರು (ಪ್ರೌಢಶಿಕ್ಷಣ), ಸಾ.ಶಿ.ಇ., ಬೆಂಗಳೂರು. ಇವರ ಪತ್ರ ಸಂಖ್ಯೆ: ಸಿ4(7)ಪ್ರೌಶಿಹೆಶಿಸ್ಥ 01/2008–09; ದಿ:18.03.2011.

*********

ಪ್ರಸ್ತಾವನೆ :

ಸರ್ಕಾರಿ ಪ್ರೌಢಶಾಲೆಗಳಲ್ಲಿ ಉತ್ತಮ ಗುಣಮಟ್ಟದ ಕಲಿಕೆ ಸಾಧಿಸುವ ಸಲುವಾಗಿ ಶಿಕ್ಷಕರ ಕೊರತೆಯಿರುವ ಶಾಲೆಗಳಿಗೆ ಸಿಬ್ಬಂದಿ ಸ್ತರ ವಿನ್ಯಾಸ [Staff Pattern] ಕ್ಕೆ ಅನುಗುಣವಾಗಿ ಶಿಕ್ಷಕರನ್ನು ಒದಗಿಸಬೇಕಾಗಿದೆ. ಸರ್ಕಾರಿ ಪ್ರೌಢಶಾಲೆಗಳ ಸಿಬ್ಬಂದಿ ಸ್ತರ ವಿನ್ಯಾಸ ಈ ಕೆಳಕಂಡಂತೆ ಇರುತ್ತದೆ.

| | | |
|---|---|---|
| ಮುಖ್ಯೋಪಾಧ್ಯಾಯರು | – | 1 |
| ಸಹ ಶಿಕ್ಷಕರು | – | 7 |
| ದ್ವಿತೀಯ ದರ್ಜೆ ಸಹಾಯಕರು | – | 1 |
| ಗ್ರೂಪ್–ಡಿ | – | 1 |
| ಒಟ್ಟು | – | 10 |

ಈ ಹಿನ್ನೆಲೆಯಲ್ಲಿ ಕೆಲವು ಸರ್ಕಾರಿ ಪ್ರೌಢಶಾಲೆಗಳಲ್ಲಿ ಸಿಬ್ಬಂದಿ ಸ್ತರ ವಿನ್ಯಾಸಕ್ಕಿಂತ ಹೆಚ್ಚಾಗಿರುವ ಶಿಕ್ಷಕರನ್ನು ಹೆಚ್ಚುವರಿ ಶಿಕ್ಷಕರೆಂದು ಗುರುತಿಸಿ ಅಗತ್ಯ ಶಾಲೆಗಳಿಗೆ ಸ್ಥಳ ನಿಯುಕ್ತಿ ಮಾಡಬೇಕಾಗಿದೆ. ಈ ರೀತಿ ಗುರುತಿಸಿದ ಹೆಚ್ಚುವರಿ ಶಿಕ್ಷಕರನ್ನು ಮತ್ತು ಹೆಚ್ಚುವರಿ ಖಾಲಿ ಹುದ್ದೆಗಳನ್ನು ಅಗತ್ಯ ಶಾಲೆಗಳಿಗೆ ಸ್ಥಳಾಂತರಿಸಲು ಅನುಮತಿ ನೀಡಲು ಕೋರಿ ಉಲ್ಲೇಖ (2)ರಲ್ಲಿ ನಿರ್ದೇಶಕರು (ಪ್ರೌಢಶಿಕ್ಷಣ), ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಇವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ ಸರ್ಕಾರಿ ಪ್ರೌಢಶಾಲೆಗಳಲ್ಲಿ ಹೆಚ್ಚುವರಿ ಖಾಲಿ ಹುದ್ದೆಗಳು ಮತ್ತು ಹೆಚ್ಚುವರಿ ಶಿಕ್ಷಕರನ್ನು ಗುರುತಿಸಿ ಸ್ಥಳಾಂತರ ಪ್ರಕ್ರಿಯೆ ನಡೆಸಲು ನಿರ್ದಿಷ್ಟ ಮಾನದಂಡ ನಿಗದಿಪಡಿಸಲು ಪ್ರಸ್ತಾವನೆಯಲ್ಲಿ ಪ್ರಸ್ತಾಪಿಸಲಾಗಿದೆ. ಅದರಂತೆ, ಈ ಕೆಳಕಾಣಿಸಿದ ಆದೇಶ ಹೊರಡಿಸಲಾಗಿದೆ.

**ಸರ್ಕಾರಿ ಆದೇಶ ಸಂಖ್ಯೆ ಇಡಿ 69 ಎಲ್‌ಬಿಪಿ 2011 ಬೆಂಗಳೂರು, ದಿನಾಂಕ :01–04–2011**

ಸರ್ಕಾರಿ ಪ್ರೌಢಶಾಲೆಗಳಲ್ಲಿರುವ ಹೆಚ್ಚುವರಿ ಶಿಕ್ಷಕರು ಮತ್ತು ಹೆಚ್ಚುವರಿ ಖಾಲಿ ಹುದ್ದೆಗಳನ್ನು ಗುರುತಿಸಿ ಅಗತ್ಯ ಶಾಲೆಗಳಿಗೆ ಜಿಲ್ಲೆಯೊಳಗೆ ಸಂಬಂಧಿಸಿದ ಉಪ ನಿರ್ದೇಶಕರು (ಆಡಳಿತ)ರವರು ಈ ಕೆಳಕಂಡ ನಿಯಮಗಳನ್ನು ಪಾಲಿಸಿ ಸ್ಥಳಾಂತರಿಸಲು ಅನುಮತಿ ನೀಡಿದೆ.

1. **ಹೆಚ್ಚುವರಿ ಹುದ್ದೆ/ಶಿಕ್ಷಕರಿರುವ ಶಾಲೆಗಳನ್ನು ಗುರುತಿಸುವ ಕ್ರಮ:**

- ಶಾಲೆಗಳಲ್ಲಿ ಸಿಬ್ಬಂದಿ ಸ್ತರ ವಿನ್ಯಾಸ [Staff Pattern] ಕ್ಕಿಂತ ಹೆಚ್ಚಾಗಿರುವವರನ್ನು ಹೆಚ್ಚುವರಿ ಶಿಕ್ಷಕರೆಂದು ಗುರುತಿಸುವುದು. ಈ ರೀತಿ ಗುರುತಿಸುವಾಗ ಶಾಲೆಯಲ್ಲಿ ಅತೀ ಹೆಚ್ಚಿನ ಕಾಲಾವಧಿಗೆ ಹುದ್ದೆಯನ್ನು ಧಾರಣೆ ಮಾಡಿರುವ ಶಿಕ್ಷಕರನ್ನು ಹೆಚ್ಚುವರಿ ಶಿಕ್ಷಕರು ಎಂದು ಗುರುತಿಸಬೇಕು.
- ವಿಷಯವಾರು ಶಿಕ್ಷಕರನ್ನು ಗಣನೆಗೆ ತೆಗೆದುಕೊಂಡು ನಿರ್ದಿಷ್ಟ ವಿಷಯದಲ್ಲಿ ಹೆಚ್ಚುವರಿಯಾಗಿರುವ ಶಿಕ್ಷಕರನ್ನು ಹೆಚ್ಚುವರಿ ಶಿಕ್ಷಕರು ಎಂದು ಗುರುತಿಸಬೇಕು.
- ಪ್ರತಿ ತರಗತಿಯಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆಯನ್ನು ಪರಿಗಣಿಸಿ ಕೆಳಗಿನಂತೆ ವಿಭಾಗಗಳನ್ನು ಗುರುತಿಸಬೇಕು.

| ಕ್ರ.ಸಂ | ವಿದ್ಯಾರ್ಥಿಗಳ ಸಂಖ್ಯೆ | ಪರಿಗಣಿಸಬೇಕಾದ ವಿಭಾಗ |
|---|---|---|
| 1 | 70 ರವರೆಗೆ | 1 ವಿಭಾಗ |
| 2 | 71–140 | 2 ವಿಭಾಗ |
| 3 | 141–210 | 3 ವಿಭಾಗ |
| 4 | 211–280 | 4 ವಿಭಾಗ |
| 5 | 281–350 | 5 ವಿಭಾಗ |

- ಹೆಚ್ಚುವರಿ ವಿಭಾಗಗಳು ಮಂಜೂರಾಗಿರುವ ಸರ್ಕಾರಿ ಪ್ರೌಢಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ನಿಗದಿತ ಪ್ರಮಾಣಕ್ಕಿಂತ ಕಡಿಮೆಯಾಗಿರುವಲ್ಲಿ ಮೇಲಿನಂತೆ ವಿದ್ಯಾರ್ಥಿ ಸಂಖ್ಯೆಗನುಗುಣವಾಗಿ ವಿಭಾಗಗಳನ್ನು ಗುರುತಿಸುವುದು. ಸಿಬ್ಬಂದಿ ಸ್ಥರ ವಿನ್ಯಾಸದ ಪ್ರಕಾರ ಅಗತ್ಯ ಶಿಕ್ಷಕರನ್ನು ಉಳಿಸಿಕೊಂಡು, ಹೆಚ್ಚುವರಿಯಾದ ಶಿಕ್ಷಕರನ್ನು ಗುರುತಿಸಿ ಅಗತ್ಯವಿರುವ ಶಾಲೆಗಳಿಗೆ ಹುದ್ದೆ ಸಹಿತ ಸ್ಥಳಾಂತರಿಸುವುದು.
- 3 ರಿಂದ 5 ವಿಭಾಗವಿರುವ ಪ್ರೌಢಶಾಲೆಗಳಲ್ಲಿ ಸಿಬ್ಬಂದಿ ಸ್ತರ ವಿನ್ಯಾಸದ ಪ್ರಕಾರ ಮುಖ್ಯಶಿಕ್ಷಕರನ್ನು ಹೊರತುಪಡಿಸಿ 7 ಶಿಕ್ಷಕರಿರಬೇಕು. ಪ್ರಥಮ ಭಾಷೆ–1, ಹಿಂದಿ–1, ಆಂಗ್ಲಭಾಷೆ–1, ಕಲಾ–1, ವಿಜ್ಞಾನ (ಪಿ.ಸಿ.ಎಂ) – 1, ವಿಜ್ಞಾನ(ಸಿ.ಬಿ.ಝಡ್) – 1, ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್–1– 1.
- ಮೇಲ್ಕಂಡ ಸ್ತರ ವಿನ್ಯಾಸದ ಶಿಕ್ಷಕರ ಜೊತೆಗೆ ಸಂಸ್ಕೃತ, ಉರ್ದು, ತೆಲುಗು, ತಮಿಳು, ಮರಾಠಿ ಶಿಕ್ಷಕರನ್ನು ಹಾಗೂ ಭಾಷಾ ಅಲ್ಪಸಂಖ್ಯಾತ ಮಾಧ್ಯಮವಿರುವ ಶಾಲೆಗಳಲ್ಲಿ ಕನ್ನಡ ಭಾಷಾ ಶಿಕ್ಷಕರಿದ್ದಲ್ಲಿ ಅವರನ್ನು ಹೆಚ್ಚುವರಿ ಶಿಕ್ಷಕರು ಎಂದು ಗುರುತಿಸುವಂತಿಲ್ಲ.

- ಆಂಗ್ಲ ಭಾಷಾ ಶಿಕ್ಷಕರ ಹುದ್ದೆ ಮಂಜೂರು ಮಾಡಿದ್ದಲ್ಲಿ ಅಥವಾ ಸರ್ಕಾರಿ ಸುತ್ತೋಲೆ ಸಂಖ್ಯೆ: ಇಡಿ 326 ಎಲ್.ಬಿ.ಪಿ 2010, ದಿನಾಂಕ: 04.12.2010ರ ಪ್ರಕಾರ ಒಂದಕ್ಕಿಂತ ಹೆಚ್ಚಿನ ಕಲಾ ಶಿಕ್ಷಕರಿದ್ದಲ್ಲಿ ಅಂತಹ ಕಡೆ ಒಂದು ಕಲಾ ಶಿಕ್ಷಕರ ಹುದ್ದೆಯನ್ನು ಆಂಗ್ಲ ಭಾಷಾ ಶಿಕ್ಷಕರ ಹುದ್ದೆಯನ್ನಾಗಿ ಪರಿವರ್ತಿಸಿದ್ದಲ್ಲಿ ಆ ಹುದ್ದೆಯನ್ನು ಹೆಚ್ಚುವರಿ ಎಂದು ಗುರುತಿಸಬಾರದು.
- 6 ಅಥವಾ 6 ಕ್ಕಿಂತ ಹೆಚ್ಚು ವಿಭಾಗಗಳಿದ್ದಲ್ಲಿ ಮುಖ್ಯಶಿಕ್ಷಕರನ್ನು ಹೊರತುಪಡಿಸಿ ಪ್ರತಿ ವಿಭಾಗಕ್ಕೆ ~~1 1\2 ಶಿಕ್ಷಕರಂತೆ ಲೆಕ್ಕಾಚಾರ ಮಾಡಿ ಅಗತ್ಯ ಶಿಕ್ಷಕರನ್ನು ಉಳಿಸಿಕೊಂಡು~~, ಹೆಚ್ಚುವರಿಯಾದ ಹುದ್ದೆ/ಶಿಕ್ಷಕರನ್ನು ಗುರುತಿಸಿ ಅಗತ್ಯವಿರುವ ಶಾಲೆಗಳಿಗೆ ಸ್ಥಳಾಂತರಿಸುವುದು.
- ಪ್ರೌಢಶಾಲೆಗಳಲ್ಲಿ ಒಂದಕ್ಕಿಂತ ಹೆಚ್ಚು ವಿಶೇಷ ಶಿಕ್ಷಕರುಗಳಿದ್ದಲ್ಲಿ (ವೃತ್ತಿ, ಚಿತ್ರಕಲೆ, ಸಂಗೀತ, ನೃತ್ಯ, ನಾಟಕ) ಕಾರ್ಯಭಾರಕ್ಕನುಗುಣವಾಗಿ ಅಗತ್ಯವಿರುವ ಶಿಕ್ಷಕರನ್ನು ಉಳಿಸಿಕೊಂಡು, ಉಳಿದ ಶಿಕ್ಷಕರನ್ನು ಹೆಚ್ಚುವರಿ ಶಿಕ್ಷಕರೆಂದು ಗುರುತಿಸಿ ಅಗತ್ಯವಿರುವ ಶಾಲೆಗಳಿಗೆ ಸ್ಥಳಾಂತರಿಸುವುದು.
- ಡಾ॥ವೈದ್ಯನಾಥನ್ ಸಮಿತಿಯನ್ವಯ ಶೈಕ್ಷಣಿಕವಾಗಿ ಅತ್ಯಂತ ಹಿಂದುಳಿದಿರುವ ತಾಲ್ಲೂಕುಗಳಲ್ಲಿ 500 ಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿರುವ ಸರ್ಕಾರಿ ಪ್ರೌಢಶಾಲೆಗಳಿಗೆ ಮಂಜೂರಾಗಿರುವ ಗ್ರೇಡ್–1 ದೈಹಿಕ ಶಿಕ್ಷಣ ಶಿಕ್ಷಕರ ಹುದ್ದೆಯನ್ನು ಹೆಚ್ಚುವರಿ ಶಿಕ್ಷಕರೆಂದು ಗುರುತಿಸುವಂತಿಲ್ಲ. ಇಂತಹ ಶಾಲೆಗಳಲ್ಲಿ ಇಬ್ಬರು ದೈಹಿಕ ಶಿಕ್ಷಣ ಶಿಕ್ಷಕರು ಸೇವೆಯಲ್ಲಿ ಮುಂದುವರೆಯಬೇಕು.

## 2. <u>ಹೆಚ್ಚುವರಿ ಹುದ್ದೆ/ಶಿಕ್ಷಕರನ್ನು ಸ್ಥಳಾಂತರಿಸುವ ಕ್ರಮ:</u>

- ಹೆಚ್ಚುವರಿ ಖಾಲಿ ಹುದ್ದೆ/ಶಿಕ್ಷಕರರಿರುವ ಶಾಲೆಗಳ ಪಟ್ಟಿ ತಯಾರಿಸುವುದು.
- ಶಿಕ್ಷಕರ ಅಗತ್ಯವಿರುವ ಶಾಲೆಗಳ ಪಟ್ಟಿಯನ್ನು ಸಿದ್ಧಪಡಿಸುವುದು.
- ಹೆಚ್ಚುವರಿ ಹುದ್ದೆ/ಶಿಕ್ಷಕರ ಪಟ್ಟಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯಲ್ಲಿ ಮತ್ತು ಜಿಲ್ಲಾ ಉಪನಿರ್ದೇಶಕರ ಕಛೇರಿಯಲ್ಲಿ ಪ್ರಕಟಿಸುವುದು. ಈ ಪ್ರಕಟಣೆ ಬಗ್ಗೆ ಸ್ಥಳೀಯ ಪತ್ರಿಕೆಗಳಲ್ಲಿ ವ್ಯಾಪಕ ಪ್ರಚಾರ ನೀಡುವುದು.
- ಹೆಚ್ಚುವರಿ ಹುದ್ದೆ/ಶಿಕ್ಷಕರ ಪಟ್ಟಿಗೆ ಆಕ್ಷೇಪಣೆ ನೀಡಲು ಐದು ದಿನ ಅವಕಾಶ ನೀಡುವುದು.
- ಶಿಕ್ಷಕರಿಂದ ಆಕ್ಷೇಪಣೆ ಸ್ವೀಕರಿಸಿದ ನಂತರ ಲೋಪದೋಷಗಳಿದ್ದಲ್ಲಿ, ಸರಿಪಡಿಸಿ ಅಂತಿಮವಾಗಿ ಹೆಚ್ಚುವರಿ ಹುದ್ದೆ/ಶಿಕ್ಷಕರ ಪಟ್ಟಿ ಪ್ರಕಟಿಸುವುದು.
- ಹೆಚ್ಚುವರಿ ಖಾಲಿ ಹುದ್ದೆಗಳನ್ನು ಅಗತ್ಯವಿರುವ ಶಾಲೆಗಳಿಗೆ ಸ್ಥಳಾಂತರಿಸುವುದು.
- ಹೆಚ್ಚುವರಿಯಾಗಿರುವ ಶಿಕ್ಷಕರನ್ನು ಅಗತ್ಯವಿರುವ ಶಾಲೆಗಳಿಗೆ ಕೌನ್ಸಿಲಿಂಗ್ ಮೂಲಕ ಸ್ಥಳ ನಿಯುಕ್ತಿಗೊಳಿಸುವುದು. ಕೌನ್ಸಿಲಿಂಗ್ ಮೂಲಕ ಸ್ಥಳ ನಿಯುಕ್ತಿಗೊಳಿಸುವಾಗ ಹೆಚ್ಚುವರಿಯಾಗಿರುವ ವಿಷಯಗಳ ಶಿಕ್ಷಕರಲ್ಲಿ ಕೆಳಕಂಡ ಶಿಕ್ಷಕರಿಗೆ ವಿನಾಯಿತಿ ನೀಡಲಾಗಿದೆ.

1. ಶೇಕಡಾ 40ಕ್ಕಿಂತ ಹೆಚ್ಚಿನ ಅಂಗವಿಕಲತೆ ಹೊಂದಿರುವ ಶಿಕ್ಷಕರು
2. ಮಾಜಿ ಸೈನಿಕರ ಪತ್ನಿಯಾಗಿರುವ ಶಿಕ್ಷಕರು
3. ವಿಧವಾ ಶಿಕ್ಷಕರು
4. ತೀವ್ರತರ ಖಾಯಿಲೆ ಇರುವ ಶಿಕ್ಷಕರು
5. ನಿವೃತ್ತಿಯಾಗಲು ಎರಡು ವರ್ಷಗಳಿಗಿಂತ ಕಡಿಮೆ ಸೇವಾವಧಿ ಉಳಿದಿರುವ ಶಿಕ್ಷಕರು.
6. ಪ್ರೌಢಶಾಲಾ ಶಿಕ್ಷಕರ ಸಂಘದ ಪದಾಧಿಕಾರಿಗಳಾದ ರಾಜ್ಯ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧ್ಯಕ್ಷರು, ಉಪಾಧ್ಯಕ್ಷರು, ಖಜಾಂಚಿ, ಕಾರ್ಯದರ್ಶಿ, ಜಂಟಿ ಕಾರ್ಯದರ್ಶಿ, ಸಂಘಟನಾ ಕಾರ್ಯದರ್ಶಿ – (ಒಟ್ಟಾರೆ ಸೇವಾವಧಿಯಲ್ಲಿ ಎರಡು ಅವಧಿಗೆ ಮಾತ್ರ ಸೀಮಿತಗೊಂಡು.)
7. ಸರ್ಕಾರಿ ನೌಕರರ ಸಂಘದ ಪದಾಧಿಕಾರಿಗಳಾಗಿದ್ದಲ್ಲಿ ಡಿಪಿಎಆರ್‌ನಿಂದ ಕಾಲ ಕಾಲಕ್ಕೆ ಹೊರಡಿಸುವ ಮಾರ್ಗಸೂಚಿ ಪ್ರಕಾರ ವಿನಾಯಿತಿಯಿರುವ ಶಿಕ್ಷಕರು.

ಹೆಚ್ಚುವರಿಯಾಗಿರುವ ವಿಷಯದಲ್ಲಿ ಪೂರ್ಣವಾಗಿ ಮೇಲ್ಕಂಡ ಶಿಕ್ಷಕರೇ ಇದ್ದಾಗ, ವಿನಾಯಿತಿ ಅನ್ವಯಿಸುವುದಿಲ್ಲ. ಇವರಲ್ಲಿ ಹಿರಿಯ ಶಿಕ್ಷಕರನ್ನು ಹೆಚ್ಚುವರಿಯೆಂದು ಗುರುತಿಸಿ ಸ್ಥಳಾಂತರಿಸುವುದು.

- ಕೌನ್ಸಿಲಿಂಗ್ ಮೂಲಕ ಸ್ಥಳಾಂತರಕ್ಕೆ ಮೊದಲು ಹೆಚ್ಚುವರಿ ಶಿಕ್ಷಕರ ಆದ್ಯತಾಪಟ್ಟಿ ಸಿದ್ಧಪಡಿಸುವುದು. ಆದ್ಯತಾಪಟ್ಟಿಯಲ್ಲಿ ಕೆಳಗಿನಂತೆ ಆದ್ಯತೆ ನಿಗದಿಪಡಿಸುವುದು.
  - ಎ) ವಿನಾಯಿತಿ ಪಟ್ಟಿಯಲ್ಲಿರುವ ಶಿಕ್ಷಕರು (ವಿನಾಯಿತಿಗೆ ಅವಕಾಶ ಇಲ್ಲದಿದ್ದಾಗ)
  - ಬಿ) ಪತಿಪತ್ನಿ ಪ್ರಕರಣಗಳಲ್ಲಿನ ಮಹಿಳಾ ಶಿಕ್ಷಕರು
  - ಸಿ) ಪತಿಪತ್ನಿ ಪ್ರಕರಣಗಳಲ್ಲಿನ ಪುರುಷ ಶಿಕ್ಷಕರು
  - ಡಿ) ಇತರೆ ಮಹಿಳಾ ಶಿಕ್ಷಕರು
  - ಇ) ಇತರೆ ಪುರುಷ ಶಿಕ್ಷಕರು
- ಆದ್ಯತಾ ಪಟ್ಟಿಯ ಅನುಸಾರ ಹೆಚ್ಚುವರಿ ಶಿಕ್ಷಕರನ್ನು ಅಗತ್ಯವಿರುವ ಶಾಲೆಗಳಿಗೆ ಕೌನ್ಸಿಲಿಂಗ್ ಮೂಲಕ ಸ್ಥಳ ನಿಯುಕ್ತಿಗೊಳಿಸುವುದು.
- ಕೌನ್ಸಿಲಿಂಗ್‌ಗೆ ಗೈರು ಹಾಜರಾದ ಶಿಕ್ಷಕರಿಗೆ ಡಮ್ಮಿ ಕೌನ್ಸಿಲಿಂಗ್ ಮೂಲಕ ಸ್ಥಳ ನಿಯುಕ್ತಿಗೊಳಿಸಿ ಕೌನ್ಸಿಲಿಂಗ್ ಮುಗಿದ ಮಾರನೇ ದಿನವೇ ನೊಂದಾಯಿತ ಅಂಚೆ (ಸ್ವೀಕೃತಿಯೊಂದಿಗೆ) ಮೂಲಕ ಆದೇಶವನ್ನು ಸಂಬಂಧಿಸಿದ ಶಿಕ್ಷಕರಿಗೆ ಕಳುಹಿಸುವುದು.

ಮೇಲೆ ತಿಳಿಸಿರುವಂತೆ ಹೆಚ್ಚುವರಿ ಶಿಕ್ಷಕರನ್ನು ಗುರುತಿಸಿ ಸ್ಥಳಾಂತರಿಸುವ ಎಲ್ಲಾ ಪ್ರಕ್ರಿಯೆಯನ್ನು ಸಾಮಾನ್ಯ ವರ್ಗಾವಣಾ ಪ್ರಕ್ರಿಯೆಯ ಪೂರ್ವದಲ್ಲಿ ಪೂರ್ಣಗೊಳಿಸಲು ಸೂಚಿಸಿದೆ. ಹೆಚ್ಚುವರಿ ಶಿಕ್ಷಕರ ಮತ್ತು ಹೆಚ್ಚುವರಿ ಖಾಲಿ ಹುದ್ದೆಗಳನ್ನು ಗುರುತಿಸಿ ಸ್ಥಳಾಂತರಿಸುವ ಕಾರ್ಯದಲ್ಲಿ ಯಾವುದೇ ಲೋಪ ಆದಲ್ಲಿ

ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿ ಹಾಗೂ ಉಪನಿರ್ದೇಶಕರು (ಆಡಳಿತ), ಇವರನ್ನು ಹೊಣೆಗಾರರನ್ನಾಗಿ ಮಾಡಲಾಗುವುದು ಹಾಗೂ ಮುಂದಿನ ಆದೇಶದವರೆಗೂ ಇದೊಂದು ನಿರಂತರ ಪ್ರಕ್ರಿಯೆಯೆಂದು ಭಾವಿಸಿ ಪ್ರತಿ ವರ್ಷವೂ ನಿಗಧಿಯಾದ ಅವಧಿಯಲ್ಲಿ ಕ್ರಮಕೈಗೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಹೆಚ್.ಟಿ. ಜಯರಾಂ)
ಸರ್ಕಾರದ ಅಧೀನ ಕಾರ್ಯದರ್ಶಿಗಳು
(ಶಿಕ್ಷಣ ಇಲಾಖೆ)

ಗೆ

1. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
2. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಗುಲ್ಬರ್ಗಾ – ಮುಂದಿನ ಕ್ರಮಕ್ಕಾಗಿ.
3. ನಿರ್ದೇಶಕರು (ಪ್ರಾಥಮಿಕ/ಪ್ರೌಢ ಶಿಕ್ಷಣ), ಆಯುಕ್ತರ ಕಛೇರಿ, ಬೆಂಗಳೂರು/ಧಾರವಾಡ/ಗುಲ್ಬರ್ಗಾ.
4. ವಿಭಾಗೀಯ ಕಾರ್ಯದರ್ಶಿಗಳು, ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ಮತ್ತು ಪದನಿಮಿತ್ತ ಜಂಟಿ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಬೆಳಗಾವಿ ಮತ್ತು ಗುಲ್ಬರ್ಗಾ.
5. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಅಗತ್ಯ ಕ್ರಮಕ್ಕಾಗಿ. (ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸಂಬಂಧಪಟ್ಟ ಜಿಲ್ಲಾ ಉಪನಿರ್ದೇಶಕರು (ಆಡಳಿತ) ಇವರ ಮುಖಾಂತರ)
6. ಕಛೇರಿ ಪ್ರತಿ.

## ಕರ್ನಾಟಕ ಸರ್ಕಾರದ ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು–1

ಸಿ4(7) ಪ್ರೌ.ಶಿ.ಹೆ.ಸ್ಥ.01/2008–09 ದಿನಾಂಕ: 01/04/2011

### ಜ್ಞಾಪನ

ಸರ್ಕಾರಿ ಆದೇಶದ ಸಂಖ್ಯೆ: ಇಡಿ 69 ಎಲ್.ಬಿ.ಪಿ.2011, ದಿನಾಂಕ: 01/04/2011 ರ ಯಥಾ ಪ್ರತಿಯನ್ನು ರವಾನಿಸುತ್ತಾ, ಸದರಿ ಆದೇಶದಲ್ಲಿ ಸೂಚಿಸಿರುವಂತೆ ಕ್ರಮಕೈಗೊಳ್ಳಲು ತಿಳಿಸಿದೆ.

(ಕೆ.ಪಿ.ಹನುಮಂತರಾಯಪ್ಪ)
ನಿರ್ದೇಶಕರು (ಪ್ರೌಢಶಿಕ್ಷಣ)

ಗೆ:

1. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಅಗತ್ಯ ಕ್ರಮಕ್ಕಾಗಿ.
2. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ/ ಧಾರವಾಡ, ಇವರ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.
3. ರಾಜ್ಯದ ಎಲ್ಲಾ ವಿಭಾಗೀಯ ಸಹನಿರ್ದೇಶಕರುಗಳಿಗೆ.
4. ಕಛೇರಿ ಪ್ರತಿ.